11. ಅಪಘಾತಕ್ಕೊಳಗಾದವರ ಸೌಲಭ್ಯಕ್ಕಾಗಿ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ನರ್ಸಿಂಗ್ ಹೋಂ ಮತ್ತು ಟೆಲಿಫೋನ್ ಭೂತ್‌ಗಳನ್ನು ಗುರುತಿಸಲಾಗಿದೆ.

12. ಪ್ರಮುಖ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ವೈದ್ಯಕೀಯ ಸಂಚಾರಿ ಘಟಕಗಳನ್ನು ಮತ್ತು ತಾಲ್ಲೂಕು ಮತ್ತು ಜಿಲ್ಲಾಕೇಂದ್ರಗಳಲ್ಲಿ ವೈದ್ಯಕೀಯ ಕೇಂದ್ರಗಳನ್ನು (ಟ್ರಾಮಾ ಸೆಂಟರ್ಸ್) ಸ್ಥಾಪಿಸುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ.

Sub : Daily wage workers in all Departments

Un-starred Question No. 456 (710)

Sri. K.S. Eshwarappa (Shimoga):- Will the Chief Minister be pleased to state.

a) Number of daily wage workers in the State in all Departments.

b) Number of workers who fulfilled the terms and conditions to become permanent employees and the action taken by the Govt. to permanent those employees in various departments as per Supreme court decision ?

c) When the process will be completed ?

Sri. M.Veerappa Moily (Chief Mininster):-

a) According to the information available with the Govt. the number of Daily Wage Employees in various departments of the Govt. as on 20-11-90 was 59,797.

b) The supreme Court in its final verdict dtd. 23.2.90, given in writ petition No. 8307-11/83 has directed to regularise the casual : Daily rated employees who have been appointed on or before 1-7-84 and are working in the various departments of State Govt. Accordingly, G.O.N.O. DPAR 2 SLC 90, dtd. 6-8-90 has been issued. As per the said order, such of those employees who have completed 10 years of service as on 31.12.89, shall be absorbed in regular service with retrospective affect from 1-1-

90 and others who are eligible are brought on to monthly rated establishment and regularised as and when they complete 10 years of service. According to the information available with the Govt. 37,562 Daily Wage Employees who become eligible for regularisation between 31.12.90 and 31.12.92, have been regularised. A committee is reviewing the implementation of this process.

c) According to the Supreme Court orders, the process shall be completed by 31-12-1997.

ವಿಷಯ : ಕುಂದಾಪುರ ವಿಧಾನ ಸಭಾಕ್ಷೇತ್ರ ಗಂಗೊಳ್ಳಿಯಲ್ಲಿ ಪೋಲಿಸ್ ಠಾಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 457 (675)

ಶ್ರೀ. ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ವಿಧಾನಸಭಾ ವ್ಯಾಪ್ತಿಯಲ್ಲಿರುವ ಗಂಗೊಳ್ಳಿಯಲ್ಲಿ ಪೋಲಿಸ್ ಠಾಣೆಯನ್ನು ಪ್ರಾರಂಭಿಸುವ ಯೋಜನೆ ಸರ್ಕಾರದ ಮುಂದಿದೆಯೇ ?

ಆ) ಈ ವಿಷಯದಲ್ಲಿ ಮುಖ್ಯಮಂತ್ರಿಗಳು ಪೋಲೀಸ್ ಠಾಣೆ ಮಂಜೂರು ಮಾಡುವ ಬಗ್ಗೆ ಹೇಳಿಕೆ ನೀಡಿರುವುದು ನಿಜವೇ ?

ಇ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ. ಚೌಡರೆಡ್ಡಿ (ಗೃಹ ಸಚಿವರು):-

ಅ) ಸರ್ಕಾರವು ಆದೇಶ ಸಂಖ್ಯೆ : ಹೆಚ್. ಡಿ. 56 ಪಿಒಪಿ 94, ದಿನಾಂಕ : 8-7-94ರಲ್ಲಿ ಗಂಗೊಳ್ಳಿಯಲ್ಲಿ ಈಗಾಗಲೇ ಪೋಲೀಸ್ ಠಾಣೆ ತೆರೆಯಲು ಮಂಜೂರಾತಿ ನೀಡಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ವಿಷಯ : ಕುಂದಾಪುರದ ಸಂಜೀವ ಖಾರ್ವಿಯ ಪ್ರಕರಣ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 458 (877)

ಶ್ರೀ. ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?